
## ಒಂಟೆ ಕತ್ತಿನ ಕಲ್ಲು

ಚಿತ್ರದುರ್ಗ ಚರಿತಾರ್ಹ ಐತಿಹಾಸಿಕ ಮಹಾನಗರ. 1ನೇ ಶತಮಾನದ ಕುರುಹು, ಪಳೆಯುಳಿಕೆಗಳ ಆಗರ. ಇಲ್ಲಿ ಏಳು ಸುತ್ತಿನ ಕೋಟೆಗಳು, ದೇವಾಲಯಗಳು, ಒಂದೆಡೆ ಜೊತೆ ಜೊತೆಗೆ ಬಂಡೆಗಳು, ಹೆಬ್ಬಂಡೆಗಳು ಇವುಗಳ ಸೃಷ್ಟಿ ಕೋಟ್ಯಾಂತರ ವರ್ಷಗಳ ಹಿಂದೆ ಭೂಕಂಪಗಳು ಘಟಿಸಿ, ಲಾವಾರಸಗಳು, ಭೂಗರ್ಭ ಸೀಳಿ ನಿಂತ ಬೆಟ್ಟಗಳೇ ಕಲ್ಲು ಬಂಡೆಗಳ ಉಗಮ ಎಂದು ಭೂಗೋಳಿಕ ಹಿನ್ನೆಲೆ ತಿಳಿಸುತ್ತದೆ. ಈ ಬಂಡೆಗಳ ರಾಶಿ ದುರ್ಗದ ಬೆಟ್ಟ. ಇಲ್ಲಿ ‘ಆನೆ ಆಕಾರ, ಒಂಟೆ ಆಕಾರ, ಹಾವಿನ ಆಕಾರ, ಕಪ್ಪೆ ಆಕಾರ, ಪಕ್ಷಿ ಆಕಾರ, ಆಮೆ ಆಕಾರ’ ನಮ್ಮ ಕಲ್ಪನೆಗೆ ಬಂದಂತೆ. ಈ ಒಂಟೆ ಆಕಾರದ ಕಲ್ಲು ಮೇಲುದುರ್ಗದ ಕಹಳೇಬತೇರಿ ಎಂಬಲ್ಲಿದೆ. ಅದರ ತೂಕ ಅಂದಾಜು 10 ಟನ್. ಒಂದು ಕೋಡು ಕಲ್ಲಿನ ಜಾರು ಬಂಡೆ ತುದಿಯಲ್ಲಿ ಕೂತಿದೆ. ಗುರುತ್ವಾಕರ್ಷಣ ನಿಯಮದ ಬಂಧಿಯಾಗಿ 6 ಅಡಿ ಮನುಷ್ಯ ಕುಬ್ಜನಾಗಿ ಕಾಣುತ್ತಾನೆ. ದುರ್ಗದ ಚಾರಣ ಪ್ರಿಯರ ಅಚ್ಚುಮೆಚ್ಚಿನ ತಾಣ ಇದು. ಪ್ರಕೃತಿಯ ಅತಿಶಯೋಕ್ತಿಯಲ್ಲವೆ?

■ **ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ**





## ಹೀಗೊಂದು ಸ್ಪರ್ಧೆ

ವೇಟ್ ಲಿಫ್ಟಿಂಗ್ ಎಂಬುದು ಕೇವಲ ಮನುಷ್ಯರಿಗೆ ಮಾತ್ರ ಸೀಮಿತವಿಲ್ಲ. ಬದಲಾಗಿ ಅದು ಪ್ರಾಣಿಗಳಿಗೂ ವಿಸ್ತರಿಸಿದೆ. ಆದರೆ ವೇಟ್ ಲಿಫ್ಟಿಂಗ್‌ನ ವಿಧಾನ ಮಾತ್ರ ಇಲ್ಲಿ ಕೊಂಚ ಭಿನ್ನ. ಹೇಗೆಂದರೆ ರಾಯಚೂರಿನಲ್ಲಿ ಪ್ರತಿ ಕಾರಹುಣ್ಣಿಮೆಯಂದು ಎತ್ತುಗಳಿಗೆ ಭಾರವಾದ ಟನ್‌ಗಳಷ್ಟು ಕಲ್ಲನ್ನು ಎಳೆಯುವ ಅಂತರ್ ರಾಜ್ಯ ಮಟ್ಟದ ಸ್ಪರ್ಧೆ ನಡೆಯುತ್ತದೆ. ನೆರೆಯ ಒಡಿಸ್ಸಾ, ಆಂಧ್ರಪ್ರದೇಶ, ಮಹಾರಾಷ್ಟ್ರ.... ಹೀಗೆ ನಾನಾ ರಾಜ್ಯಗಳ ಆಸಕ್ತರು ತಮ್ಮ ಎತ್ತುಗಳೊಂದಿಗೆ ಈ ಸ್ಪರ್ಧೆಯಲ್ಲಿ ಪಾಲ್ಗೊಳ್ಳುತ್ತಾರೆ. ಸ್ಥಳೀಯ ಮುನ್ನೂರು ಕಾಪು ಸಮಾಜವು ಈ ಸ್ಪರ್ಧೆಯನ್ನು ಪ್ರತಿ ವರ್ಷ ಏರ್ಪಡಿಸುತ್ತದೆ ಹಾಗೂ ನಗದು ಬಹುಮಾನಗಳನ್ನು ನೀಡುತ್ತದೆ. ಟಗರು ಕಾಳಗ, ಕುಸ್ತಿ ಸ್ಪರ್ಧೆ, ಭಾರವಾದ ಗುಂಡುಗಳನ್ನು ಎತ್ತುವ ಸ್ಪರ್ಧೆ.... ಹೀಗೆ ನಾನಾ ಸ್ಪರ್ಧೆಗಳು ಇಲ್ಲಿ ನಡೆಯುತ್ತವೆ.

■ **ಈರಣ್ಣ ಬೆಂಗಾಲಿ, ರಾಯಚೂರು**

## ಹಸು ಬೆನ್ನ ಮೇಲೆ ಆನೆ ಸೊಂಡಿಲು

ಮಹಾರಾಷ್ಟ್ರಕ್ಕೆ ಈ ಹಿಂದೆ ಪ್ರವಾಸ ಹೋಗಿದ್ದೆ. ಅಲ್ಲಿನ ಪಂಢರಾಪುರದ ಹೊರವಲಯದಲ್ಲಿ ಒಂದು ವಿಚಿತ್ರವಾದ ಹಸು ಕಣ್ಣಿಗೆ ಬಿತ್ತು. ಆ ಹಸುವಿನ ಬೆನ್ನ ಮೇಲೆ ಸೊಂಡಿಲಿನಂತಹ ರಚನೆ ಇದ್ದು, ಅದನ್ನು ಪೂಜ್ಯ ಭಾವನೆಯಿಂದ ಎಲ್ಲರೂ ಪೂಜಿಸುತ್ತಿದ್ದರು. ಭಕ್ತರಿಗೆ ದರ್ಶನ ನೀಡಲೆಂದೇ ಆ ಹಸುವನ್ನು ಕೆಲಕಾಲ ಅಲ್ಲಿ ನಿಲ್ಲಿಸಲಾಗಿತ್ತು. ಈ ಹಸು ದೈವಸ್ವರೂಪವಾದದ್ದು ಎಂದು ಹೇಳಿ ಅಲ್ಲಿದ್ದವರಿಂದ ದಕ್ಷಿಣೆ ಪಡೆಯುತ್ತಿದ್ದರು. ಆದರೆ, ವಾಸ್ತವವಾಗಿ ಅದು ಪ್ರಕೃತಿಯ ವೈಚಿತ್ರ್ಯವಷ್ಟೇ. ದೇಹದ ಯಾವುದೇ ಭಾಗದಿಂದ ಬೆಳೆಯುವ ಅನಗತ್ಯ ಗಡ್ಡೆಯಷ್ಟೆ. ಅದು ಈ ಸೊಂಡಿಲಿನ ಆಕಾರ ಪಡೆದಿದಿದೆಯಷ್ಟೇ.

■ **ಕೆ.ಜಿ. ಮಂಜುಳಾ ವಿಠಲರಾವ್, ಚಿತ್ರದುರ್ಗ**

